ಹಿಂಬರಹ ಸಂಖ್ಯೆ: ಡಿಟಿಇ 21 ಡಿವಿಪಿ(2) 2015 ದಿನಾಂಕ: 20/09/2016.

ಸರ್ಕಾರದ ಆದೇಶದ ಪ್ರತಿಯನ್ನು ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಸಂಬಂಧಪಟ್ಟ ಈ ಕೆಳಕಂಡ ಅಧಿಕಾರಿಗಳಿಗೆ ಹಾಗೂ ವಿಭಾಗಗಳಿಗೆ ಕಳುಹಿಸಲಾಗಿದೆ.

01. ಅಧ್ಯಕ್ಷರು / ಕಾರ್ಯದರ್ಶಿಗಳು, ಅಂಜುಮನ್-ಎ-ಇಸ್ಲಾಂ ಪಾಲಿಟೆಕ್ನಿಕ್, ಬೆಂಗಳೂರು ರಸ್ತೆ, ಮಲ್ಲಸಮುದ್ರ ಹತ್ತಿರ, ಗದಗ-582103.
02. ಪ್ರಿನ್ಸಿಪಾಲರು, ಅಂಜುಮನ್-ಎ-ಇಸ್ಲಾಂ ಪಾಲಿಟೆಕ್ನಿಕ್, ಬೆಂಗಳೂರು ರಸ್ತೆ, ಮಲ್ಲಸಮುದ್ರ ಹತ್ತಿರ, ಗದಗ-582103.
03. ಜಂಟಿ ನಿರ್ದೇಶಕರು [ಆಡಳಿತ/ಪರೀಕ್ಷೆ/ತನಿಖೆ/ಎಟಿಎಸ್]
04. ಉಪ ನಿರ್ದೇಶಕರು [ಯೋಜನೆ/ಪರೀಕ್ಷೆ/ತನಿಖೆ]
05. ಸಹಾಯಕ ನಿರ್ದೇಶಕರು [ಯೋಜನೆ/ಪರೀಕ್ಷೆ/ತನಿಖೆ/ಎಂಪಿಸಿ]
06. ಉಪ ನಿರ್ದೇಶಕರು (ಸಾಂಖ್ಯಿಕ ವಿಭಾಗ)
07. ಆಡಳಿತಾಧಿಕಾರಿಗಳಿಗೆ
08. ರಿಜಿಸ್ಟ್ರಾರ್ (ಪರೀಕ್ಷೆ/ಎಸಿಎಂ)
09. ಅಧೀಕ್ಷಕರು, ಎಸಿಎಂ ವಿಭಾಗ
10. ಕಾರ್ಯನಿರ್ವಾಹಕರು, ಎಸಿಎಂ(2) ವಿಭಾಗ
11. ಸರ್ಕಾರಿ ಆದೇಶಗಳ ಕಡತಕ್ಕೆ
12. ಈ ಗೌರ್‌ನೆನ್ಸ್ ಸೆಲ್‌ಗೆ
13. ಕಛೇರಿ ಪ್ರತಿ.
14. ಕಾರ್ಯನಿರ್ವಾಹಕರು. ಡಿವಿಪಿ(1)ವಿಭಾಗ.

ಜಂಟಿ ನಿರ್ದೇಶಕರು (ಎಟಿಎಸ್)

21/9/2016

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಅಂಜುಮನ್-ಎ-ಇಸ್ಲಾಂ (ಪಾಲಿಟೆಕ್ನಿಕ್) ಗದಗ್ ಈ ಸಂಸ್ಥೆಗೆ 2016-17ನೇ ಸಾಲಿಗೆ ಮತೀಯ ಅಲ್ಪಸಂಖ್ಯಾತ ಸ್ಥಾನಮಾನವನ್ನು ವಿಸ್ತರಿಸುವ ಬಗ್ಗೆ-

-----

**ಓ ದ ಲಾ ಗಿ ದೆ:-**

1. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 131 ಟಿಪಿಇ 2014, ದಿನಾಂಕ:20-08-2014.
2. ಸರ್ಕಾರದ ಆದೇಶ ಸಂಖ್ಯೆ: ಇಡಿ 66 ಟಿಪಿಇ 2015, ದಿನಾಂಕ:14-07-2015.
3. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ಇವರ ಪತ್ರ ಸಂಖ್ಯೆ: ಡಿಟಿಇ 21 ಡಿವಿಪಿ (2) 2015, ದಿನಾಂಕ:02-02-2015.

**ಪ್ರ ಸ್ತಾ ವ ನೆ:-**

ಮೇಲೆ ಓದಲಾದ ಕ್ರ.ಸಂ.(1)ರ ಅಧಿಸೂಚನೆಯಲ್ಲಿ ರಾಜ್ಯ ಸರ್ಕಾರವು ತಾಂತ್ರಿಕ ಶಿಕ್ಷಣ ಸಂಸ್ಥೆಗಳಿಗೆ ಅಲ್ಪಸಂಖ್ಯಾತ ಸ್ಥಾನಮಾನವನ್ನು ನೀಡಲು / ನವೀಕರಿಸಲು ಪರಿಷ್ಕೃತ ಮಾರ್ಗಸೂಚಿಗಳನ್ನು ರೂಪಿಸಿಸಲಾಗಿರುತ್ತದೆ. ಮೇಲೆ ಓದಲಾದ ಕ್ರ.ಸಂ.(2)ರ ಆದೇಶದಲ್ಲಿ ಅಂಜುಮನ್-ಎ-ಇಸ್ಲಾಂ (ಪಾಲಿಟೆಕ್ನಿಕ್) ಗದಗ್ ಈ ಸಂಸ್ಥೆಗೆ 2015-16ನೇ ಸಾಲಿಗೆ ಕೆಲವೊಂದು ಷರತ್ತುಗಳನ್ನು ವಿಧಿಸಿ ಮತೀಯ ಅಲ್ಪಸಂಖ್ಯಾತ ಸ್ಥಾನಮಾನವನ್ನು ವಿಸ್ತರಿಸಲಾಗಿರುತ್ತದೆ.

ಮುಂದುವರೆದು, ಮೇಲೆ ಓದಲಾದ ಕ್ರ.ಸಂ.(3)ರಲ್ಲಿ ತಾಂತ್ರಿಕ ಶಿಕ್ಷಣ ನಿರ್ದೇಶಕರು ಅಂಜುಮನ್-ಎ-ಇಸ್ಲಾಂ ಪಾಲಿಟೆಕ್ನಿಕ್ (ಅನುದಾನಿತ), ಗದಗ ಈ ಸಂಸ್ಥೆಯು ಸರ್ಕಾರದ ಅಧಿಸೂಚನೆ ಸಂಖ್ಯೆ: : ಇಡಿ 131 ಟಿಪಿಇ 2014, ದಿನಾಂಕ:20-08-2014ರಲ್ಲಿ ರಾಜ್ಯ ಸರ್ಕಾರವು ತಾಂತ್ರಿಕ ಶಿಕ್ಷಣ ಸಂಸ್ಥೆಗಳಿಗೆ ಅಲ್ಪಸಂಖ್ಯಾತ ಸ್ಥಾನಮಾನವನ್ನು ನೀಡಲು / ನವೀಕರಿಸಲು ಪರಿಷ್ಕೃತ ಮಾರ್ಗಸೂಚಿಗಳನ್ನು ರೂಪಿಸಿದ್ದು, ಈ ಮಾರ್ಗಸೂಚಿಗಳ ಪ್ರಕಾರ ಈಗಾಗಲೇ ಅಲ್ಪಸಂಖ್ಯಾತ ಸ್ಥಾನಮಾನವನ್ನು ಹೊಂದಿರುವ ತಾಂತ್ರಿಕ ಶಿಕ್ಷಣ ಸಂಸ್ಥೆಗಳು ಸದರಿ ಸ್ಥಾನಮಾನವನ್ನು ಮುಂದುವರೆಸಲು ಕೋರಿ, ನಿಯತಕಾಲಿಕ ವರದಿ (ಪೀರ್ಯಾಡಿಕಲ್ ರಿಪೋರ್ಟ್) ಯನ್ನು ಸಲ್ಲಿಸಬೇಕಾಗಿದ್ದು, ಅದರಂತೆ ಗದಗನ ಅಂಜುಮನ್-ಎ-ಇಸ್ಲಾಂ (ಅನುದಾನಿತ) ಪಾಲಿಟೆಕ್ನಿಕ್ ಸಂಸ್ಥೆಯು ಈ ಬಗ್ಗೆ ನಿಯತಕಾಲಿಕ ವರದಿ (ಪೀರ್ಯಾಡಿಕಲ್ ರಿಪೋರ್ಟ್) ಯನ್ನು ಸಲ್ಲಿಸಿರುವುದರಿಂದ ಸದರಿ ಸಂಸ್ಥೆಗೆ 2016-17ನೇ ಸಾಲಿಗೆ ಮತೀಯ ಅಲ್ಪಸಂಖ್ಯಾತ ಸ್ಥಾನಮಾನವನ್ನು ವಿಸ್ತರಿಸಬಹುದಾಗಿದೆ ಎಂದು ನಿರ್ದೇಶಕರು ಶಿಫಾರಸ್ಸು ಮಾಡಿ ಈ ಬಗ್ಗೆ ಸೂಕ್ತ ಸರ್ಕಾರಿ ಆದೇಶವನ್ನು ಹೊರಡಿಸಬೇಕೆಂದು ಕೋರಿರುವ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 067 ಟಿಪಿಇ 2016.**

**ಬೆಂಗಳೂರು, ದಿನಾಂಕ:07ನೇ ಸೆಪ್ಟೆಂಬರ್ 2016.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಗದಗ್‌ನ ಅಂಜುಮನ್-ಎ-ಇಸ್ಲಾಂ (ಅನುದಾನಿತ) ಪಾಲಿಟೆಕ್ನಿಕ್‌ಗೆ 2016-17ನೇ ಸಾಲಿಗೆ ಮತೀಯ ಅಲ್ಪಸಂಖ್ಯಾತ ಸ್ಥಾನಮಾನವನ್ನು ಈ ಕೆಳಕಂಡ ಷರತ್ತುಗೊಳಪಡಿಸಿ ವಿಸ್ತರಿಸಲಾಗಿದೆ.

1. ಸದರಿ ಪಾಲಿಟೆಕ್ನಿಕ್‌ಗೆ 2016-17ನೇ ಸಾಲಿಗೆ ನಿಗದಿಪಡಿಸಲಾದ ಪ್ರತಿ ಕೋರ್ಸಿನ ಇನ್‌ಟೇಕ್‌ನಲ್ಲಿ ಶೇ.50 ರಷ್ಟನ್ನು ಸರ್ಕಾರದ ಮೀಸಲಾತಿ ಆದೇಶದನ್ವಯ ನೋಡಲ್ ಸೆಂಟರ್ ಮೂಲಕ ಪ್ರವೇಶಾತಿ ನೀಡಿ ತಾಂತ್ರಿಕ ಶಿಕ್ಷಣ ನಿರ್ದೇಶಕರು ತುಂಬತಕ್ಕದ್ದು.

2. ಈ ಪಾಲಿಟೆಕ್ನಿಕ್‌ನ ಆಡಳಿತ ಮಂಡಳಿಯ 2/3 ರಷ್ಟು ಸದಸ್ಯರು ಮತೀಯ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರಾಗಿರಬೇಕು.
3. ಪ್ರತಿ ಕೋರ್ಸಿನ ಶೇ.50ರಷ್ಟು ಸೀಟುಗಳನ್ನು ಆಡಳಿತ ಮಂಡಳಿಯ ನಡೆಸಲ್ಪಡುತ್ತಿರುವ ಸಮುದಾಯ ವಿದ್ಯಾರ್ಥಿಗಳಿಂದ ತುಂಬಬೇಕಾಗಿದ್ದು, ಅದರಲ್ಲಿ ಶೇ.75 ರಷ್ಟು ಸೀಟುಗಳನ್ನು ಕರ್ನಾಟಕ ರಾಜ್ಯದಲ್ಲಿನ ಸದರಿ ಸಂಸ್ಥೆಯು ನಡೆಸಲ್ಪಡುತ್ತಿರುವ ಸಮುದಾಯದ ಅಭ್ಯರ್ಥಿಗಳಿಂದ ತುಂಬತಕ್ಕದ್ದು.
4. 2017-18ನೇ ಸಾಲಿನಲ್ಲಿ ಮತೀಯ ಅಲ್ಪಸಂಖ್ಯಾತ ಸ್ಥಾನಮಾನವನ್ನು ಮುಂದುವರೆಸುವ ಬಗ್ಗೆ ಸರ್ಕಾರದ ಆದೇಶ ಸಂಖ್ಯೆ: ಇಡಿ 131 ಟಿಪಿಇ 2014, ದಿ:20-08-2014ರಲ್ಲಿ ತಿಳಿಸಿರುವ ಮಾರ್ಗಸೂಚಿಗಳಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಸ್.ವೆಂಕಟೇಶ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ)

**ಗೆ:-**

1. ತಾಂತ್ರಿಕ ಶಿಕ್ಷಣ ನಿರ್ದೇಶಕರು, ಬೆಂಗಳೂರು
2. ಕಾರ್ಯದರ್ಶಿಗಳು, ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು
3. ಕಾರ್ಯದರ್ಶಿಗಳು, ಅಂಜುಮನ್-ಎ-ಇಸ್ಲಾಂ ಪಾಲಿಟೆಕ್ನಿಕ್, ಬೆಂಗಳೂರು ರಸ್ತೆ, ಮಲ್ಲಸಮುದ್ರ ಹತ್ತಿರ, ಗದಗ-582103
4. ಪ್ರಾಂಶುಪಾಲರು, ಅಂಜುಮನ್-ಎ-ಇಸ್ಲಾಂ ಪಾಲಿಟೆಕ್ನಿಕ್, ಬೆಂಗಳೂರು ರಸ್ತೆ, ಮಲ್ಲಸಮುದ್ರ ಹತ್ತಿರ, ಗದಗ-582103 (ತಾಂತ್ರಿಕ ಶಿಕ್ಷಣ ನಿರ್ದೇಶಕರ ಮುಖಾಂತರ)
5. ಶಾಖಾ ರಕ್ಷಾ ಕಡತ / ಹೆಚ್ಚಿನ ಪ್ರತಿ / ಒಡಿಜಿಸಿ

----3....